**ಕರ್ನಾಟಕ ಸರ್ಕಾರ**

ಸಂ: ಜಸಂಇ 27 ಎಂಟಿಜಿಡ್ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:11/04/2012.

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು.

**ಇವರಿಗೆ:**

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಬೆಂಗಳೂರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಸಂ. 0381
12 APR 2012
ಬೆಂಗಳೂರು - 560 001.

**ಮಾನ್ಯರೇ,**

**ವಿಷಯಃ-** Release of Grant under the Accelerated Irrigation Benefits Programme (AIBP), during 2011-12 in respect of Chandrampalli Irrigation Project of Karnataka.

**ಉಲ್ಲೇಖ:-** ಪತ್ರ ಸಂಖ್ಯೆ:ಕನೀನಿನಿ/ನೀಯೋವ/ಮುಇಂಗು/ತಾಂಸ-3/ಸಇಂ-10/2011-12/5482 ದಿನಾಂಕ:27/3/2012.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಇಂಜಿನಿಯರ್, ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾ ರಡಿ ಚಂದ್ರಂಪಳ್ಳಿ ಯೋಜನೆ, ಹತ್ತಿಕುಣಿ ಯೋಜನೆ ಮತ್ತು ಮುಲ್ಲಾಮರಿ ಮೇಲ್ದಂಡೆ ಯೋಜನೆಗಳ ಆಧುನೀಕರಣ ಕಾಮಗಾರಿಗಳಿಗೆ ಕ್ರಮವಾಗಿ ರೂ.14.93 ಕೋಟಿಗಳು, ರೂ.6.75 ಕೋಟಿಗಳು ಮತ್ತು ರೂ.8.21 ಕೋಟಿಗಳನ್ನು ಕೇಂದ್ರ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.

ಈ ಮೂರು ಯೋಜನೆಗಳ ಆಧುನೀಕರಣ ಕಾಮಗಾರಿಯನ್ನು ಎಐಬಿಪಿ ರಡಿ ಇ.ಆರ್.ಎಂ. ಕೇಂದ್ರ ಸಹಾಯಧನವನ್ನು ಪಡೆದುಕೊಳ್ಳಲು ಪ್ರಸ್ತಾವನೆಯನ್ನು ನಿಗಧಿತ ನಮೂನೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಕೇಂದ್ರ ಸರ್ಕಾರದಡಿ ಹತ್ತಿಕುಣಿ ಮತ್ತು ಮುಲ್ಲಾಮರಿ ಮೇಲ್ದಂಡೆ ಯೋಜನೆಗಳ ಪ್ರಸ್ತಾವನೆಗಳನ್ನು ಕೇಂದ್ರ ಜಲ ಆಯೋಗದಿಂದ ಪರಿಶೀಲಿಸಿಕೊಂಡು ಕೇಂದ್ರ ಆರ್ಥಿಕ ಇಲಾಖೆಯಿಂದ ಅನುದಾನ ಬಿಡುಗಡೆಯ ಹಂತದಲ್ಲಿರುತ್ತದೆ. ಆದರೆ ಚಂದ್ರಂಪಳ್ಳಿ ಯೋಜನೆಗೆ ಸಂಬಂಧಿಸಿದಂತೆ ಯೋಜನೆಯ ಅಡಿ ಪೂರ್ತಿ ಅಚ್ಚುಕಟ್ಟು ಪ್ರದೇಶವು ಚಿಂಚೋಳಿ ತಾಲ್ಲೂಕಿನಡಿ ಬರುತ್ತಿದ್ದು ರಾಜ್ಯ ಸರ್ಕಾರವು ಚಿಂಚೋಳಿ ತಾಲ್ಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿದ್ದು, ಅದರಂತೆ ಕೇಂದ್ರ

ಸಹಾಯದನವನ್ನು ಅನುಪಾತ 90:10 ರಂತೆ ಬಿಡುಗಡೆ ಮಾಡುವಂತೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಆಯೋಗದಿಂದ ಬರ ಪೀಡಿತ ಪ್ರದೇಶವೆಂದು ಘೋಷಿಸಲ್ಪಟ್ಟಿರುವ ಕರ್ನಾಟಕ ರಾಜ್ಯದ ಪಟ್ಟಿಯಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಚಿಂಚೋಳಿ ತಾಲ್ಲೂಕು ಸೇರಿರುವುದಿಲ್ಲ.

ಆದುದರಿಂದ ಈ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆ ನಿರ್ದೇಶನದಂತೆ ಚಂದ್ರಂಪಳ್ಳಿ ಯೋಜನೆಗೆ ಕೇಂದ್ರ ಸಹಾಯದನ 90:10 ರ ಬದಲಾಗಿ 25:75 ಅನುಪಾತದಂತೆ ನೀಡಬಹುದಾಗಿದ್ದು, ರಾಜ್ಯ ಸರ್ಕಾರದಿಂದ ಒಟ್ಟು ಅಂದಾಜು ಮೊತ್ತದ ರೂ.14.93 ಕೋಟಿಗಳ ಶೇ.75 ಅಂದರೆ ರೂ.11.20 ಕೋಟಿಗಳನ್ನು ಭರಿಸಬೇಕಾಗಿದ್ದು, ಈಗ ಈ ಮೂರು ಯೋಜನೆಗಳ ಪೈಕಿ ಹತ್ತಿಕುಣಿ ಮತ್ತು ಚಂದ್ರಂಪಳ್ಳಿ ಆಧುನೀಕರಣ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ಸೇರ್ಪಡೆಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ರೂ.11.20 ಕೋಟಿಗಳನ್ನು ನಿಗಮದಿಂದ ಒದಗಿಸುವ ಬಗ್ಗೆ ಈ ಕೂಡಲೇ ಸರ್ಕಾರಕ್ಕೆ ತಿಳಿಸಿದ್ದಲ್ಲಿ, ಕೇಂದ್ರ ಸರ್ಕಾರಕ್ಕೆ ಉಳಿದ ಶೇ.25 ರಷ್ಟು ಅಂದರೆ ರೂ.3.73 ಕೋಟಿಗಳನ್ನು ಕೂಡಲೇ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುತ್ತಿದೆ.

ಲಗತ್ತು:

1. ಉಲ್ಲೇಖಿತ ಪತ್ರ.
2. ದಿನಾಂಕ:15/2/2012 ರ ಪತ್ರದ ಪ್ರತಿ.

ತಮ್ಮ ನಂಬುಗೆಯ,

I. D. Damar 11/4/12

(ಐ.ಡಿ. ಧಮನ್)

ವಿಶೇಷ ಕರ್ತವ್ಯಾಧಿಕಾರಿ,

ಜಲಸಂಪನ್ಮೂಲ ಇಲಾಖೆ (ಕೃಭಾಜನಿ).

234

238

# ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಮುಖ್ಯ ಅಭಿಯಂತರರ ಕಚೇರಿ, ಕನೀನಿನಿ.,
ನೀರಾವರಿ ಯೋಜನೆಗಳ ವಲಯ,
ಗುಲಬರ್ಗಾ – 585 102.

ಸಂ:ಕನೀನಿನಿ/ನೀಯೋವ/ಮುಇಂಗು/ತಾಂಸ-3/ಸ.ಇಂ-10/2011-12/ 5482 ದಿನಾಂಕ: 27 MAR 2012

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ : Release of Grant under the Accelerated Irrigation Benefits Programe (AIBP), during 2011-12 in respect of Chandrampalli Irrigation Project of Karnataka.

ಉಲ್ಲೇಖ :
1) ತಮ್ಮ ಕಚೇರಿ ಪತ್ರ ಸಂಖ್ಯೆ: ಜ.ಸಂ.ಇ/27/ಎಂ.ಟಿ.ಝಡ್/2009, ದಿ: 14-03-2012.
2) ಭಾರತ ಸರ್ಕಾರ, ಜಲ ಸಂಪನ್ಮೂಲ ಮಂತ್ರಾಲಯ, ನವದೆಹಲಿ, ರವರ ಪತ್ರ ಸಂಖ್ಯೆ: 31/2/2012/ಪಿ.ಆರ್/ಕೆ.ಟಿ.ಎ/ಚಂದ್ರಂಪಳ್ಳಿ, ದಿ: 29-02-2012.
3) ಈ ಕಚೇರಿ ಪತ್ರ ಸಂಖ್ಯೆ: ಕ.ನೀ.ನಿ.ನಿ/ನೀಯೋವ/ಮುಇಂಗು/ತಾಸ-3/ಸ.ಇಂ-10/2011-12/5319, ದಿನಾಂಕ: 19-03-2012.

S(KBJNL)

-:oOo:-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ ಪತ್ರ (3) ರಲ್ಲಿ ಚಂದ್ರಂಪಳ್ಳಿ ಯೋಜನೆಯ ಅಚ್ಚುಕಟ್ಟು ಪ್ರದೇಶ ನಕಾಶದಲ್ಲಿ ನೀರಾವರಿ ಪ್ರದೇಶ ಮತ್ತು DPAP ಪ್ರದೇಶವನ್ನು ನಕಾಶೆಯಲ್ಲಿ ಗುರುತಿಸಿ, ಚಿಂಚೋಳಿ ತಾಲೂಕ ಬರಗಾಲ ಪ್ರದೇಶ ಎಂದು ಘೋಶಿಸಲ್ಪಟ್ಟಿದೆ ಎಂದು ವರದಿ ಸಲ್ಲಿಸಲಾಗಿತ್ತು. ಅದರಂತೆ ತಮ್ಮ ಕಚೇರಿಯಿಂದ ಕೇಂದ್ರ ಜಲಸಂಪನ್ಮೂಲ ಆಯೋಗಕ್ಕೆ ಈ ಬಗ್ಗೆ ಪತ್ರ ಬರೆಯಲಾಗಿತ್ತು.

ಸದರಿ ಮಾಹಿತಿಯೊಡನೆ ಚಂದ್ರಂಪಳ್ಳಿ ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ದಿನ ನವದೆಹಲಿಯಲ್ಲಿ ಕೇಂದ್ರ ಜಲ ಆಯೋಗದ ಕಚೇರಿಗೆ ಭೇಟಿ ನೀಡಿ, ಚಂದ್ರಂಪಳ್ಳಿ ಯೋಜನೆಯ ಇ.ಆರ್.ಎಂ. ಪ್ರಸ್ತಾವನೆಗೆ ಅನುಮೋದನೆ ಕೋರಲಾಗಿ, ಸದರಿ ಕೇಂದ್ರ ಜಲ ಆಯೋಗದ ಮುಖ್ಯಸ್ಥರು, ಚಂದ್ರಂಪಳ್ಳಿ ಯೋಜನೆಯು ಕೇಂದ್ರ ಯೋಜನಾ ಆಯೋಗದ ಪಟ್ಟಿಯಲ್ಲಿ ಬರಗಾಲ ಪ್ರದೇಶವೆಂದು ಘೋಶಿಸಿಲ್ಲದಿರುವುದರಿಂದ, ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯದ ಆರ್ಥಿಕ ಅನುದಾನವು 25:75 ಪ್ರಮಾಣದಲ್ಲಿ ಇರಬೇಕಾಗಿರುವುದರಿಂದ ರಾಜ್ಯ ಸರಕಾರದಿಂದ ಅಂದಾಜು ಮೊತ್ತದ ಶೇಕಡಾ 75 ಪ್ರಮಾಣವನ್ನು ಭರಿಸಲು ಒಪ್ಪಿ ಪ್ರಮಾಣ ಪತ್ರ ನೀಡಿದರೆ ಸದರಿ ಯೋಜನೆಯನ್ನು ಕೇಂದ್ರ ಸರ್ಕಾರದ ಅನುದಾನದಡಿಯಲ್ಲಿ ಶೇಕಡಾ 25 ಮೊತ್ತ ಭರಿಸಲು ಅನುಮೋದನೆ ನೀಡುವುದಾಗಿ ಸೂಚಿಸಿರುತ್ತಾರೆಂದು ನವದೆಹಲಿಯಿಂದ ಕೆಳ ಸಹಿದಾರರಿಗೆ ದೂರವಾಣಿ ಮುಖಾಂತರ ತಿಳಿಸಿರುತ್ತಾರೆ. ಆದುದರಿಂದ ಈ ಬಗ್ಗೆ ಸರ್ಕಾರದಿಂದ ಕೇಂದ್ರ ಜಲ ಆಯೋಗದ ಕಚೇರಿಗೆ ಪ್ರಮಾಣ ಪತ್ರ ಒದಗಿಸಬೇಕೆಂದು ಈ ಮೂಲಕ ಕೋರಲಾಗಿದೆ. ಈಗಾಗಲೇ ಟೆಂಡರ್ ಮುಖಾಂತರ ಯೋಜನೆಯ ಕಾಮಗಾರಿಯನ್ನು ಕೈಗೆತ್ತಿಕೊಂಡು ಪ್ರಗತಿಯಲ್ಲಿರುವುದರಿಂದ ಸದರಿ ಪ್ರಮಾಣ ಪತ್ರವನ್ನು ಅವಶ್ಯಕವಾಗಿ ಶೀಘ್ರತೆಯ ಮೇರೆಗೆ ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಅಭಿಯಂತರರು, ಕನೀನಿನಿ,
ನೀರಾವರಿ ಯೋಜನೆಗಳ ವಲಯ,
ಗುಲಬರ್ಗಾ.

29/3/12

# ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

TO AEO Sir

237

ಸಂ:ಕನೀನಿನಿ:ನೀಯೋವ:ಮುಇಂಗು:ಉ.ವಿ:
ವಿವ-5:2011-12 4705

ಮುಖ್ಯ ಇಂಜಿನಿಯರವರ ಕಚೇರಿ, ಕನೀನಿನಿ.,
ನೀರಾವರಿ ಯೋಜನೆಗಳ ವಲಯ,
ಗುಲಬರ್ಗಾ-585102.
ದಿನಾಂಕ: 15 FEB 2012

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಕೇಂದ್ರ ಕಚೇರಿ ವಾಲ್ಮಿ ಕಟ್ಟಡ,
ಬೇಲೂರು ಬೆಳಗಾಂವಿ ರಸ್ತೆ,
ಧಾರವಾಡ-580007.

ಮಾನ್ಯರೆ,

ವಿಷಯ:- ಕಾರಂಜಾ ಯೋಜನೆ ನಿರ್ಮಾಣ ವಿಭಾಗ ಬೀದರದ ಅಧೀನದಲ್ಲಿರುವ ಚಂದ್ರಂಪಳ್ಳಿ ಯೋಜನೆ ಉಪ ವಿಭಾಗವನ್ನು ಬೆಣ್ಣೆತೋರಾ ಯೋಜನಾ ವಿಭಾಗ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ಆದೇಶ.

ಉಲ್ಲೇಖ:-
1) ಸರ್ಕಾರದ ಆದೇಶ ಸಂ:ಜಸಂಇ 263 ಸೇಎಸು 2011 ದಿ:18-1-2012
2) ಸರ್ಕಾರದ ತಿದ್ದು ಪಡಿ ಆದೇಶ ಸಂ:ಜಸಂಇ 263 ಸೇಎಸು 2011 ದಿ:01-02-2012
3) ಅ.ಅ.ಕನೀನಿನಿ, ನೀರಾವರಿ ಯೋಜನೆ ನಿರ್ಮಾಣ ವೃತ್ತ ಗುಲಬರ್ಗಾ ಇವರ ಪತ್ರ ಸಂ:ಅಅ/ಕನೀನಿನಿ/ನಿಯೋನಿ ವೃತ್ತ/ತಾ.ಶಾ.ಅ/2011-12/3726 ದಿ:03-02-2012.

ESK-1

1/04
21/2/2012

****

ವಿಷಯದಲ್ಲಿ ಈ ಮೂಲಕ ನಿವೇದಿಸುವುದೇನೆಂದರೆ ಉಲ್ಲೇಖಿತ ಸರ್ಕಾರದ ಅದೇಶಗಳ ಪ್ರಕಾರ ಚಂದ್ರಂಪಳ್ಳಿ ಯೋಜನೆ ಉಪ ವಿಭಾಗ, ಚಂದಾಪೂರ ಕಚೇರಿಯನ್ನು ಕೆ.ಪಿ.ಸಿ. ವಿಭಾಗ ಸಂ.1, ಬೀದರ ರಿಂದ ಬೇರ್ಪಡಿಸಿ ಬೆಣ್ಣೆತೋರಾ ಯೋಜನೆ ವಿಭಾಗ ಸಂ.4, ಹೆಬ್ಬಾಳ ಇದರ ಆಡಳಿತ ವ್ಯಾಪ್ತಿಗೆ ಒಳಪಡಿಸಿ ಆದೇಶಿಸಲಾಗಿದೆ.

ಬೆಣ್ಣೆತೋರಾ ಯೋಜನೆಯು ಈಗಾಗಲೇ ನಿಗಮದ ವ್ಯಾಪ್ತಿಯಲ್ಲಿ ಇರುವುದರಿಂದ, ಸಧ್ಯ ಸೇರ್ಪಡೆಗೊಂಡ ಚಂದ್ರಂಪಳ್ಳಿ ಯೋಜನೆ ಉಪ ವಿಭಾಗ, ಚಂದಾಪೂರ ಕಚೇರಿಯು ನಿಗಮದ ವ್ಯಾಪ್ತಿಯಲ್ಲಿ ಸೇರ್ಪಡೆ ಗೊಳಿಸುವ ಬಗ್ಗೆ ತಮ್ಮ ಕಚೇರಿಯಿಂದ ಈ ವರೆಗೂ ಯಾವುದೇ ಆದೇಶ ಈ ಕಚೇರಿಗೆ ಬಂದಿರುವುದಿಲ್ಲಾ.

2ನೇ ಪುಟಕ್ಕೆ

236



ಸಧ್ಯ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಬೆಣ್ಣೆತೋರಾ ಯೋಜನೆ ವಿಭಾಗ ಸಂ.4, ಹೆಬ್ಬಾಳದವರು, ಚಂದ್ರಂಪಳ್ಳಿ ಯೋಜನೆಅಡಿಯಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಕಾಮಗಾರಿ ಕೈಗೊಳ್ಳಲು ಅಂದಾಜು ಪಟ್ಟಿ ರೂ.328.96 ಲಕ್ಷ ಮೊತ್ತಕ್ಕೆ ಅನುಮೋದನೆಗಾಗಿ ಅಧೀಕ್ಷಕ ಅಭಿಯಂತರರು, ಕನೀನಿನಿ, ನೀರಾವರಿ ಯೋಜನೆ ನಿರ್ಮಾಣ ವೃತ್ತ ಗುಲಬರ್ಗಾ ಇವರಿಗೆ ಸಲ್ಲಿಸಿರುತ್ತಾರೆ. ಈ ಕುರಿತು ಅಧೀಕ್ಷಕ ಅಭಿಯಂತರರು ನೀರಾವರಿ ಯೊಜನೆ ನಿರ್ಮಾಣ ವೃತ್ತ ಗುಲಬರ್ಗಾ ಇವರು ಉಲ್ಲೇಖ (3)ರ ಪತ್ರದ ಪ್ರಕಾರ (ಪ್ರತಿ ಲಗತ್ತಿಸಿದೆ) ಈ ಕಚೇರಿಗೆ ಪತ್ರ ಬರೆದು, ಸಲ್ಲಿಸಲಾದ 16 ಅಂದಾಜು ಪಟ್ಟಿಗಳ ಕುರಿತು ತೆಗೆದು ಕೊಳ್ಳಬೇಕಾದ ಕ್ರಮದ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ವಿಷಯದಲ್ಲಿ ಅಧೀಕ್ಷಕ ಅಭಿಯಂತರರು, ಕನೀನಿನಿ, ನೀರಾವರಿ ಯೋಜನೆ ನಿರ್ಮಾಣ ವೃತ್ತ, ಗುಲಬರ್ಗಾದವರು ಕೋರಿರುವಂತೆ ಚಂದ್ರಂಪಳ್ಳಿ ಯೋಜನೆ ಉಪ ವಿಭಾಗ ಚಂದಾಪೂರ ಕಚೇರಿಯನ್ನು ನಿಗಮದ ವ್ಯಾಪ್ತಿಯೊಳಗೆ ಸೇರ್ಪಡೆಗೊಳಿಸಿದ ಕುರಿತು ಸೂಕ್ತ ಆದೇಶವನ್ನು ಹಾಗೂ ಅಂದಾಜು ಪಟ್ಟಿಗಳ ಅನುಮೋದನೆ ಮಾಡುವಲ್ಲಿ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ಸೂಕ್ತ ನಿರ್ದೇಶನಗಳನ್ನು ಶೀಘ್ರವೇ ನೀಡುವಂತೆ, ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ತಮ್ಮ ವಿಶ್ವಾಸಿ,

ಅಡಕಗಳು: ಮೇಲಿನಂತೆ.
3 ಸಂ.

ಸಹಿ/-
ಮುಖ್ಯ ಇಂಜಿನಿಯರರು,ಕನೀನಿನಿ.,
ನೀರಾವರಿ ಯೋಜನೆಗಳ ವಲಯ, ಗುಲಬರ್ಗಾ.

1) ಪ್ರತಿಯನ್ನು ಸೂಪರಿಂಟೆಂಡಿಂಗ್ ಇಂಜಿನಿಯರ,ಕನೀನಿನಿ., ನೀರಾವರಿ ಯೋಜನೆ ನಿರ್ಮಾಣ ವೃತ್ತ, ಗುಲಬರ್ಗಾ ಇವರ ಮಾಹಿತಿಗಾಗಿ ಉಲ್ಲೇಖಿತ ಪತ್ರ (3)ರನ್ವಯ ರವಾನಿಸಲಾಗಿದೆ.
2) ಪ್ರತಿಯನ್ನು ಕಾರ್ಯನಿರ್ವಾಹಕ ಅಭಿಯಂತರರು,ಕನೀನಿನಿ., ಬೆಣ್ಣೆತೋರಾ ಯೋಜನೆ ವಿಭಾಗ ಸಂ.4, ಹೆಬ್ಬಾಳ ಇವರ ಮಾಹಿತಿಗಾಗಿ ರವಾನಿಸಲಾಗಿದೆ.
3) ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು,ಜಸಂಇ., ಚಂದ್ರಂಪಳ್ಳಿ ಯೋಜನೆ ಉಪ ವಿಭಾಗ, ಚಂದಾಪೂರ ಇವರ ಮಾಹಿತಿಗಾಗಿ ರವಾನಿಸಿದೆ.
4) ಪ್ರತಿಯನ್ನು ಉಲ್ಲೇಖ(3)ರ ಪತ್ರದ ಪ್ರತಿಯೊಂದಿಗೆ ಈ ಕಚೇರಿಯ ಉಪ ಮುಖ್ಯ ಇಂಜಿನಿಯರರು, ಹಾಗೂ ಲೆಕ್ಕ ಪರಿಶೋಧನಾಧಿಕಾರಿ ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕೊಡಲಾಗಿದೆ.
5) ಒಂದು ಹೆಚ್ಚಿನ ಪ್ರತಿ.

20.

ಮುಖ್ಯ ಇಂಜಿನಿಯರರು,ಕನೀನಿನಿ.,
ನೀರಾವರಿ ಯೋಜನೆಗಳ ವಲಯ,
ಗುಲಬರ್ಗಾ.

15/02/2012